## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.512/2024

| | | |
|---|---|---|
| ಸಾಕ್ಷಿದಾರರ ಹೆಸರು | : ಎಲಿಜ್ಞಾ ಸಾಲ್ಡಾನ | ಫ್ರಾಸಾ-4 |
| ಗಂಡನ ಹೆಸರು | : ಜಾನ್ ಸಾಲ್ಡಾನ | ಚಾಸಾ-5 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 02.12.2025 |
| ವಾಸಸ್ಥಳ | : ಕಾರ್ಮಕ್ಕಿ | |

### :ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಈ ಹಿಂದೆ ನೋಡಿದ್ದೇನೆ. ಚಾಸಾ-1 ನನ್ನ ಮೈದುನ. ಚಾಸಾ-3 ರವರ ಪರಿಚಯ ನನಗಿದೆ. ಚಾಸಾ-4 ನನ್ನ ಅತ್ತೆ.

ದಿ.18.06.2023 ರಂದು ಬೆ.9.15 ರ ಸಮಯಕ್ಕೆ ನಾನು ಚಾಸಾ-1 ಮತ್ತು 4 ರವರೊಂದಿಗೆ ಚಾಸಾ-1 ರವರ ಕಾರಿನಲ್ಲಿ ಕಾರ್ಮಕ್ಕಿಯಲ್ಲಿ ಇರುವ ನಮ್ಮ ಮನೆಯಿಂದ ಮೂಡಿಗೆರೆ ಚರ್ಚ್ ಗೆ ಹೋಗುತ್ತಿರುವಾಗ ಒಂದು ಬಿಳಿ ಕಾರು ಅತೀವೇಗವಾಗಿ ಬಂದು ನಾವು ಇದ್ದ ಕಾರಿಗೆ ಡಿಕ್ಕಿ ಪಡಿಸಿತು. ಅಪಘಾತದಿಂದ ನನ್ನ ತಲೆ, ಮುಖ, ಕುತ್ತಿಗೆ, ಸೊಂಟ ಮತ್ತು ಹೊಟ್ಟೆಗೆ ಪೆಟ್ಟಾಯಿತು. ನಂತರ ನಮ್ಮನ್ನು ಮನೆಯವರು ಮತ್ತು ಊರಿನವರು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಂದ ನಮ್ಮನ್ನು ಮಂಗಳೂರಿನ ಕೆ.ಎಸ್. ಹೆಗಡೆ ಆಸ್ಪತ್ರೆಗೆ ಕಳುಹಿಸಿದರು. ನಮಗೆ ಗುದ್ದಿಸಿದ ಕಾರನ್ನು ಆರೋಪಿಯೇ ಓಡಿಸುತ್ತಿದ್ದರು.

ಸಾಕ್ಷಿಯು ನಿಪಿ-11 ರ ಪೋಟೋವನ್ನು ನೋಡಿ ಕೆಂಪು ಬಣ್ಣದ ಕಾರಿನಲ್ಲಿ ತಾವು ಹೋಗುತ್ತಿದುದ್ದಾಗಿ ಹಾಗೂ ಬಿಳಿ ಬಣ್ಣದ ಕಾರು ನಮಗೆ ಗುದ್ದಿಸಿದ್ದು ಎಂದು ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

### ಪಾಟೀ ಸವಾಲು: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:

ನಾನು ಹೇಳಿದ ದಿನಾಂಕ KA-19-MH-3039 ನ್ಯಾನೋ ಕಾರಿನಲ್ಲಿ ನಾವು ಹೋಗುತ್ತಿದ್ದೆವು ಎಂದರೆ ಸರಿ. ನಮ್ಮ ಮನೆಯಿಂದ ಸುಮಾರು 50 ಅಡಿ ದೂರದ ಮೂಡಿಗೆರೆ ಕಡೆ ರಸ್ತೆಯಲ್ಲಿ ಎದುರಿನಿಂದ ಬಂದ KA-04-AA-7012 ಕಾರು ಅತೀವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಬಂದು ನಮಗೆ ಡಿಕ್ಕಿ ಪಡಿಸಿತ್ತು ಎಂದರೆ ಸರಿ.

### ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಕೆ.ಪಿ. ರವರ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ

ನಾನು ಕಾರಿನ ಹಿಂಬದಿ ಸೀಟಿನಲ್ಲಿ ಕೂತಿದ್ದೆ. ಈ ಕಾರಣ ನನಗೆ ಕಾರಿನ ಎಂದುರಿನಿಂದ ಬರುತ್ತಿದ್ದ ವಾಹನಗಳು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಎದುರಿನಿಂದ ಬಂದ ಕಾರು ಎಷ್ಟು ಕಿ.ಮೀ

ವೇಗವಾಗಿ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಆ ದಿನ ನಾವು ಬರುತ್ತಿದ್ದ ರಸ್ತೆ ತಿರುವಿನಿಂದ ಕೂಡಿದ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಆ ರಸ್ತೆಯಲ್ಲಿ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಈ ಕಾರಣ ಯಾವುದೇ ವಾಹನಗಳು ಅತೀವೇಗವಾಗಿ ಚಾಲನೆ ಮಾಡಲಾಗುವುದಿಲ್ಲ ಎಂದರೆ ಸರಿ. ನಮಗೆ ಪೆಟ್ಟಾಗಿದ್ದ ಕಾರಣ ನಾವು ವಿಮಾ ಕೋರಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ. ಅಪಘಾತವಾದ ನಂತರ ಸ್ವಲ್ಪ ಸಮಯದ ನಂತರ ನನಗೆ ಪ್ರಜ್ಞೆ ಇರಲಿಲ್ಲ. ಅಪಘಾತವಾದ ಸಮಯಕ್ಕೆ ನಾನು ಆರೋಪಿಯನ್ನು ನೋಡಿದ್ದೆ. ವಿಮಾ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಮುಖ್ಯ ರಸ್ತೆಯ ಎಡ ಮತು ಬಲಕ್ಕೆ ನೋಡದೇ ನೇರವಾಗಿ ಕಾರು ಚಾಲನೆ ಮಾಡಿದ ಕಾರಣ ಅಪಘಾತವಾಗಿದೆಯೇ ಹೊರತು ಆರೋಪಿಯ ತಪ್ಪಿನಿಂದಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.